
# ಹಾಡಿನ ಹಾದಿಗೆ ಹಲವು ಗುರಿ



ಸಾಹಿತ್ಯದ ಗೊತ್ತುಗುರಿ ಏನಿರಬೇಕು ಎಂಬ ಬಗ್ಗೆ ನಡೆಯುವ ಚರ್ಚೆಗೆ ಸಾಹಿತ್ಯದಷ್ಟೇ ಇತಿಹಾಸವಿದೆ. ಸಾಹಿತಿಗಳು ಸ್ವಂತ ಸುಖಕ್ಕೆ ಹಾಡಿಕೊಳ್ಳಬೇಕೇ ಅಥವಾ ಜನಹಿತವನ್ನು ಕಾಯಬೇಕೇ ಎನ್ನುವ ವಿಚಾರದಲ್ಲಿ ಅನೇಕ ಸಿದ್ಧಾಂತಗಳು ಇವೆ. ಅಷ್ಟಿದ್ದರೂ ಜನರ ನಡುವಿನಿಂದ ಹುಟ್ಟುವ ಸಾಹಿತ್ಯ, ಜನರ ಕಷ್ಟನಷ್ಟಗಳನ್ನು ಕುರಿತು ದನಿ ಎತ್ತಬೇಕು ಎನ್ನುವುದನ್ನು ವಿಭಿನ್ನ ವೈಚಾರಿಕ ನೆಲೆಹಿನ್ನೆಲೆಗಳಿಂದ ಬಂದ ಸಾಹಿತಿಗಳು ಒಪ್ಪುತ್ತಾರೆ. ಆದರೆ ಅದು ಸಾಹಿತ್ಯವಾಗಿಯೂ ಇರಬೇಕು ಎನ್ನುವ ಮಾತೂ ಸರಿಯಾದದ್ದೇ. ಎಲ್ಲ ಸಾಹಿತ್ಯವೂ ತನ್ನ ಕಾಲಘಟ್ಟದ ಘಟನೆಗಳಿಗೆ ತನ್ನದೇ ಆದ ರೀತಿಯಲ್ಲಿ ಕನ್ನಡಿ ಹಿಡಿದಿರುತ್ತದೆ. ವ್ಯಕ್ತ ಅವ್ಯಕ್ತ ಪ್ರತಿಬಿಂಬಗಳಿಲ್ಲದ ಸಾಹಿತ್ಯ ಇರಲಾರದು.

'ಬರೆಯುವುದಷ್ಟೇ ನಮ್ಮ ಕೆಲಸ ಎಂದು ಲೇಖಕಿಯರು ಸುಮ್ಮನಿರಬಾರದು, ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಪ್ರತಿಭಟಿಸಬೇಕು, ದಿನ ಬೆಳಗಾದರೆ ಎಳೆಯ ಕಂದಮ್ಮಗಳ ಮೇಲೆ ನಡೆಯುತ್ತಿರುವ ಅತ್ಯಾಚಾರದ ಹೀನ ದೌರ್ಜನ್ಯದ ಸುದ್ದಿಗಳನ್ನು ಕೇಳಿ ಹೊಟ್ಟೆಯೊಳಗೆ ಮುಳ್ಳು ಚುಚ್ಚಿದಂತಾಗುತ್ತಿದೆ. ಇದು ಬರೆಯುವ ಮತ್ತು ಉತ್ಸವಗಳನ್ನು ಮಾಡುವ ಸಮಯವಲ್ಲ. ನಾವೆಲ್ಲರೂ ಸ್ವಲ್ಪಕಾಲ ಬರೆಯುವುದನ್ನು ಬದಿಗೊತ್ತಿ ಸಮಾಜದಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ಪಾಲ್ಗೊಳ್ಳೋಣ' ಎಂದು ಹಿರಿಯ ಲೇಖಕಿ ಮಾಲತಿ ಪಟ್ಟಣಶೆಟ್ಟಿ ವಿಷಾದದಿಂದ ಹೇಳಿದ್ದಾರೆ. ಸಮಾಜದ ಅನ್ಯಾಯಗಳ ವಿರುದ್ಧ ಪ್ರತಿರೋಧವನ್ನು ಬರಹದಲ್ಲಿ ರೂಪಿಸುವುದಲ್ಲದೆ ಅದನ್ನು ಸಾರ್ವಜನಿಕವಾಗಿ ವಿಸ್ತರಿಸುವ ಜವಾಬ್ದಾರಿಯೂ ಸಾಹಿತಿಗಳಿಗಿದೆ ಎಂಬುದನ್ನು ಅವರು ಮತ್ತೊಮ್ಮೆ ನೆನಪಿಸಿದ್ದಾರೆ. ಹೊಸಗನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಆಂದೋಲನಗಳ ರೂಪ ಪಡೆದ ಎಲ್ಲ ಪ್ರತಿರೋಧಗಳಿಗೆ ಸದಾ ವೇದಿಕೆಯಾಗಿರುವ 'ಮಯೂರ' ಇದಕ್ಕೆ ಒತ್ತಾಸೆಯಾಗಿರುತ್ತದೆ. ಮತ್ತು ಲೇಖಕ ಲೇಖಕಿಯರ ಅಂಥ ಬರಹಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂಬುದನ್ನು ಎತ್ತಿ ಹೇಳಬೇಕಿಲ್ಲ.

– ಆರ್. ಪೂರ್ಣಿಮಾ